ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಹದ್ದಿಗೂ, ಹದ್ದು ಮೀರಿದವರಿಗೂ ಇರುವ ಅಂತರವೇನು ರಾಂ?*



ಹದ್ದಿಗೆ ಆಧಾರವೇ ಸುಡುಗಾಡು; ಹದ್ದು ಮೀರಿದವರ ಆಚಾರವೇ ಸುಡುಗಾಡು.

ದೇವೇಂದ್ರ, ಕಡೂರು
*ತಾಳ್ಮೆಯನ್ನು ಬಂಧಿಸಿಟ್ಟರೆ ಸ್ಫೋಟಿಸುವ ಸಾಧ್ಯತೆ ಉಂಟಂತೆ?*
ನಮ್ಮಲ್ಲಲ್ಲ. ಮಾಧ್ಯಮಗಳು, ಸಮಾಜ ಕನ್ನಡವನ್ನು ಕುಲಗೆಡಿಸಿದರೂ ದನಿಯೆತ್ತದ ಶವದ ತಾಳ್ಮೆ ನಮ್ಮದು!

ಜಲಜಾ ರಾವ್, ಬೆಂಗಳೂರು
*ಶಿಷ್ಟ ಸಾಹಿತ್ಯ ಮತ್ತು ಆಡುಭಾಷಿಗರ ಸಂಖ್ಯೆ ಹೆಚ್ಚಳ; ಇವೆರಡರಲ್ಲಿ ಕನ್ನಡಭಾಷಾ ಬೆಳವಣಿಗೆಗೆ ಯಾವುದು ಅತಿ ಮುಖ್ಯ?*
ಗುಣದ್ದೋ, ಗಣದ್ದೋ? ಗಣದ್ದಾದರೆ ಆಡುಭಾಷೆ; ಗುಣದ್ದಾದರೆ ಶಿಷ್ಟ ಸಾಹಿತ್ಯ.

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಸರ್ಕಾರವು ಪೆಟ್ರೋಲ್, ಡೀಸೆಲ್‌ಗಳನ್ನು ಮನೆಮನೆಗೂ ವಿತರಿಸುವುದಂತೆ. ಹೆಂಡವನ್ನೂ ವಿತರಿಸಿದರೆ?*




ಕುಡಿದು ವಿಫಲಚೇತನರಾದವರು ಆಮ್ಲೆಟ್ ಭಾಗ್ಯ, ಚಿಪ್ಸ್ ಭಾಗ್ಯ, ಅವರನ್ನೇ ನಂಬಿದವರು ಹಗ್ಗಭಾಗ್ಯ ಬೇಡುವರಂತೆ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು
*ಹಸೆಮಣೆ ಏರುತ್ತೇವೆ ಎನ್ನುತ್ತಾರೆ. ಆದರೆ ಮಣೆಯ ಮೇಲೆ ಹಸೆ ಇರುವುದಿಲ್ಲವಲ್ಲಾ....?*
ಇರುತ್ತದಲ್ಲಾ.... ಹ – ಹಸನಾದ; ಸೆ – ಸೆಳೆತ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಬಾಳೆಹಣ್ಣು ತಿನ್ನುವುದಕ್ಕೂ, ಸಿಪ್ಪೆಯ ಮೇಲೆ ಕಾಲಿಡುವುದಕ್ಕೂ ಏನು ವ್ಯತ್ಯಾಸ?*
ಒಂದು ಅಂತರಂಗ ಶುದ್ಧಿ; ಇನ್ನೊಂದು ಬಹಿರಂಗ ಸುದ್ದಿ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಮಾತು ಬೆಳ್ಳಿ. ಮೌನ ಬಂಗಾರ. ಗುಣ?*
ಈ ಬೆಳ್ಳಿ, ಬಂಗಾರಗಳಿಗೆ ರೂಪ ನೀಡುವ ಕುಲುಮೆ.

ವಿ. ಹೇಮಂತಕುಮಾರ್, ಬೆಂಗಳೂರು
*ಮಂಗಳಗ್ರಹ ಮುಂದೊಂದು ದಿನ ಭೂಮಿಯ ನೆಂಟರ ಮನೆ ಆಗಬಹುದೆ?*
ಊಹೂಂ. ಹೆಚ್ಚೆಂದರೆ ನಮ್ಮೆಲ್ಲ ಉಪಗ್ರಹಗಳ ಪಾರ್ಕಿಂಗ್ ಲಾಟ್ ಆಗಬಹುದು.

ಮುರಲೀಧರ ಕುಲಕರ್ಣಿ, ಬೀದರ್
*ಒಬ್ಬಳೇ ಹೆಂಡತಿಗೆ ಭಾರ್ಯಾ, ಅರ್ಧಾಂಗಿ, ಧರ್ಮಪತ್ನಿ, ಶ್ರೀಮತಿ ಎಂಬ ಹೆಸರುಗಳೇಕೆ?*
ಭಾರಿ ತೂಕ; ಅಂಗಿಯ ಅರ್ಧದಷ್ಟರಲ್ಲಿ ಬ್ಲೌಸ್; ಬಿಟ್ಟೆ ಸಿಕ್ಕವಳು; ಬುದ್ಧಿ ಶ್ರೀಮಂತಿಕೆ ಒಬ್ಬಳಲ್ಲೇ ಇರುತ್ತದಲ್ಲ!

ಹೆಚ್.ವಿ. ಶ್ರೀಧರ್, ಬೆಂಗಳೂರು
*ವಿಶ್ವ ತಾಯಂದಿರ ದಿನ, ವಿಶ್ವ ಪುತ್ರಿಯರ ದಿನ ಇರುವಂತೆ ವಿಶ್ವ ಹೆಂಡತಿಯರ ದಿನ ಏಕಿಲ್ಲ?*
'ಹೆಂಡತಿಯರ' ಎಂದು ಆಚರಿಸಹೊರಟ ಮರುದಿನವೇ ವಿಶ್ವ ವಿಚ್ಛೇದನ ನೋಟೀಸ್ ದಿನ ಆಚರಿಸಬೇಕಾಗುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
*ವೈರಾಗ್ಯಮೂರ್ತಿ ಬಾಹುಬಲಿ ತನ್ನ ಹೆಸರಿನ ಚಲನಚಿತ್ರವನ್ನು ನೋಡಿ ಪ್ರತಿಕ್ರಿಯಿಸುವಂತಿದ್ದರೆ?*
ಶ್ರವಣಕ್ಕೆ ಅಬ್ಬರ, ಬೆಳಕಿನ ಕೊಳವಾದ ಚಲನ ಚಿತ್ರಕ್ಕಿಂತ ಶ್ರವಣ ಬೆಳಗೊಳದಲಿ ಸ್ಥಿರಚಿತ್ತವೇ ಉತ್ತಮ ಎನ್ನುತ್ತಿದ್ದನಂತೆ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ
*ಪ್ರಪಂಚ ಎಂದರೇನು?*
ಪ್ರಯತ್ನಶೀಲತೆಗೆ ಪಂಚಾಮೃತವನ್ನೀವ ಚಲಶಕ್ತಿ.

ರತ್ನಜ, ಮೈಸೂರು
*ನೀವು ಕನ್ನಡ ವಾಹಿನಿಗಳ ಸೀರಿಯಲ್‌ಗಳನ್ನು ನೋಡುವುದೇ ಇಲ್ಲವೆ?*
ನೋಡುತ್ತೇನೆ – ಅವುಗಳಿಗೆ ಎಳೆಯುವ ಚಾಳಿ ಕಳೆದು ಸೆಳೆಯುವ ಶಕ್ತಿ ಮೂಡಿದಂದು.

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು
ಹೆತ್ತವರು ಹೆಣ್ಣುಮಕ್ಕಳಿಗೆ ದ್ರೌಪದಿ ಎನ್ನುವ ಹೆಸರನ್ನು ಇಡುವುದಿಲ್ಲವೇಕೆ?
ಎಗ್ಗಾಮಗ್ಗಾ ಹಠಮಾರಿಯಾಗಿ ತಲೆ ಬಾಚ್ಕೊಳಕ್ಕೆ ರಕ್ತದ ಕೇಶತೈಲ, ಮೂಳೆಯ ಬಾಚಣಿಗೆ ಕೇಳಿಯಾಳೆಂಬ ಭಯ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
*ಸೆಲಿಬ್ರಿಟಿಗಳ ಸಂಭ್ರಮ ಎಲ್ಲಿಯವರೆಗೆ?*
ಟಿವಿಗಳ ಕ್ಯಾಮರಾ ತಮ್ಮತ್ತಲೇ ಇರುವವರೆಗೆ.

ಅಮರಯ್ಯಾ ಪತ್ರಿಮಠ, ಸುರಪೂರ
*ಗಯ್ಯಾಳಿಗೂ, ಚಪಲ ಚೆನ್ನಿಗರಾಯನಿಗೂ ಮದುವೆಯಾದರೆ ಸಂಸಾರ ಹೇಗಿರುತ್ತೆ?*
ನಾಲ್ಕು ಜನ ನಿಂತು ನೋಡುವಂತೆ!

ಪಿ.ಜಿ. ರಾಘವೇಂದ್ರ, ಮೈಸೂರು
*ಸೂರ್ಯಗ್ರಹಣ ಚಂದ್ರಗ್ರಹಣಗಳಂತೆ ಭೂಮಿಗ್ರಹಣ ಏಕಿಲ್ಲ?*



ಇದೆ. ಜಮೀನಿನ ಮೇಲೆ ರಾಜಕಾರಣಿಯ ನೆರಳು ಬಿದ್ದಾಗ ಉಂಟಾಗುವುದೇ ಭೂಮಿಗ್ರಹಣ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಹೆಣ್ಣಿನಿಂದಲೇ ಮನೆಯ ಉದ್ಧಾರ, ಅವಳಿಂದಲೇ ಹಾಳು ಎನ್ನುತ್ತಾರೆ. ಗಂಡಿನ ಪಾತ್ರ ಏನೂ ಇಲ್ಲವೆ?*
ಇದೆಯಲ್ಲ. ಸಪೋರ್ಟಿಂಗ್ ಆಕ್ಟರ್.

ಎಂ.ಎ. ಕುಮಾರ್, ಬೆಂಗಳೂರು
*ನಾವು ಪೂಜಿಸುವ ದೇವರುಗಳು ಕಲ್ಲಿನ ರೂಪದಲ್ಲೇ ಇರುತ್ತಾರಲ್ಲ, ಏಕೆ?*
ನಮ್ಮ ಹೃದಯಕ್ಕೆ ಮ್ಯಾಚಿಂಗ್ ಆಗಲು.

ಪೇಂಟರ್ ಪಾಪು, ಸಂತೇಮರಹಳ್ಳಿ
*ದೇಹಕ್ಕೆ ಗಾಯವಾದರೆ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆಯಬಹುದು. ಮನಸ್ಸಿಗೆ ಗಾಯವಾದರೆ?*
ತಾಳ್ಮೆಯೆಂಬ ಮುಲಾಮು ಹಚ್ಚಿ ಸಮಯವೆಂಬ ಗಾಳಿಗೆ ಆರಲು ಬಿಡಿ.

ರಾಮ್